ದಿನಾಂಕ 03.04.2024 ರಂದು ಸಾಕ್ಷಿಗೆ ಪ್ರಮಾಣೀಕರಿಸಲಾಯಿತು.

ಪಾಟಿ ಸವಾಲು ಪ್ರತಿವಾದಿ ಪರ ಶ್ರೀ ಕೆ ವಿ ಎಮ್ ವಕೀಲರಿಂದಃ-

ನಮಗೆ ಸೇರಿದ ಸ್ವತ್ತಿನಲ್ಲಿ ಪ್ರತಿವಾದಿಯರು ಒತ್ತಾಯವಾಗಿ ಬಂದು ಕುಳಿತಿರುವ ಕಾರಣ ನಾನು ಈ ದಾವೆ ಮಾಡಿರುತ್ತೇನೆ. ದಾವಾ ಸ್ವತ್ತಿನ ಸಂ. 773. ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಬರೆದಿರುವ ಮಾಹಿತಿ ತಿಳಿದಿದೆ. ದಾವಾ ಸ್ವತ್ತು ಮೂಲತಃ ನಮ್ಮ ಅಜ್ಜನಿಗೆ ಸರ್ಕಾರದಿಂದ ಮಂಜೂರಾಗಿರುತ್ತದೆ. ಯಾವ ದಿನಾಂಕ, ತಿಂಗಳು, ವರ್ಷದಲ್ಲಿ ಮಂಜೂರಾಗಿರುತ್ತದೆ ಎಂದು ಗೊತ್ತಿಲ್ಲ. ನನ್ನ ಅಜ್ಜನಿಗೆ ಮಂಜೂರಾತಿ ಪತ್ರ ಕೊಟ್ಟಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಮಂಜೂರಾತಿ ಪತ್ರದ ದೃಢೀಕೃತ ಪ್ರತಿಯನ್ನು ಪಡೆದುಕೊಳ್ಳಲು ಪ್ರಯತ್ನಿಸಿದ್ದೀರಾ ಎಂದರೆ ಸಾಕ್ಷಿಯು ಖಾತೆಯ ನಕಲನ್ನು ಪಡೆದುಕೊಂಡು ನಮ್ಮ ಹೆಸರಿಗೆ ಮಾಡಿಸಿಕೊಂಡಿದ್ದೇವೆ ಎನ್ನುತ್ತಾರೆ. ಖಾತೆಯ ನಕಲನ್ನು ಹೊರತುಪಡಿಸಿ ಮೂಲ ದಾಖಲಾತಿಗಳನ್ನು ಹಾಜರಪಡಿಸಿಲ್ಲ ಎಂದರೆ ಗೊತ್ತಿಲ್ಲ. ಎಷ್ಟು ವಿಸ್ತೀರ್ಣದ ಸ್ವತ್ತು ನಮ್ಮ ಅಜ್ಜನಿಗೆ ಮಂಜೂರಾಗಿರುತ್ತದೆ ಎಂದು ತೋರಿಸಲು ಮೂಲ ದಾಖಲೆಗಳನ್ನು ಹಾಜರಪಡಿಸಿಲ್ಲ ಎಂದರೆ ಸರಿ. ನನ್ನ ಅಜ್ಜ ಯಾವಾಗ ನಿಧನ ಹೊಂದಿರುತ್ತಾರೆ ಎಂದು ಗೊತ್ತಿಲ್ಲ.

2. ನನ್ನ ಅಜ್ಜನಿಗೆ 5 ಜನ ಹೆಣ್ಣು ಮಕ್ಕಳು ಮತ್ತು 4 ಜನ ಗಂಡು ಮಕ್ಕಳು ಇರುತ್ತಾರೆ. ಸದರಿ 9 ಜನ ಮಕ್ಕಳ ನಡುವೆ ಯಾವುದೇ ಹಿಸ್ಸಾಪತ್ರ ಆಗಿಲ್ಲ. ನಿಪಿ 10 ವಿಭಾಗಪತ್ರವನ್ನು 20.05.2016 ರಂದು ಮಾಡಿಕೊಂಡಿದ್ದೇವೆ ಎಂದರೆ ಸರಿ. ಸದರಿ ವಿಭಾಗಪತ್ರದಲ್ಲಿ ಹೆಣ್ಣು ಮಕ್ಕಳನ್ನು ಸೇರಿಸಿಲ್ಲ ಎಂದರೆ ಸರಿ. ಈ ದಾವೆಗಿಂತ ಪೂರ್ವದಲ್ಲಿ ಪ್ರತಿವಾದಿ ವಿರುದ್ಧ ನನ್ನ ಅಜ್ಜಿ ದಾವೆ ಮಾಡಿದ್ದರು ಎಂದು ಕೇಳಿದ್ದೇನೆ ನನಗೆ ಗೊತ್ತಿಲ್ಲ. ಸದರಿ ದಾವೆ ಏನಾಯಿತು ಗೊತ್ತಿಲ್ಲ. ಸದರಿ ದಾವೆಯನ್ನುಜ್ಜ ನನ್ನ ಚಿಕ್ಕಪ್ಪಂದಿರು ನಡೆಸಿದ್ದ ಬಗ್ಗೆ ಗೊತ್ತಿದೆ, ಆದರೆ ಬಡತನ ಇದ್ದ ಕಾರಣ ಅವರಿಗೆ ಬರಲು ಆಗುತ್ತಿರಲಿಲ್ಲ, ಆದ್ದರಿಂದ ದಾವೆ ನಿಂತಿರುತ್ತದೆ.

3. ನನ್ನ ಅಜ್ಜಿ ಪ್ರತಿವಾದಿ ಮತ್ತು ಅವರ ತಂದೆ ವಿರುದ್ಧ ಶಿವಮೊಗ್ಗದ ವೆಕೇಶನ್ ನ್ಯಾಯಾಲಯದಲ್ಲಿ ಅ. ದಾ. 59/1986 ನ್ನು ಸಲ್ಲಿಸಿದ್ದರು ಎಂದರೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಸಾಕ್ಷಿ ಮಾಡಿಸದ ಕಾರಣ ವಜಾ ಆಗಿರುತ್ತದೆ ಎಂದರೆ ಸರಿ. ಪ್ರತಿವಾದಿಯರು ನನ್ನ ಅಜ್ಜಿಯ ವಿರುದ್ಧ ಅ. ದಾ. 66/1986 ನ್ನು ಅವರ ಸ್ವತ್ತಾದ ಅಸೆಸ್ ಮೆಂಟ್ ನಂಬರ್ 772/1491 ರ ಸಂಬಂಧ ಮಾಡಿದ್ದರು ಎಂದರೆ ಗೊತ್ತಿಲ್ಲ. ಸದರಿ ದಾವೆಯನ್ನು 18 X 70 ಅಡಿಗೆ ಸಲ್ಲಿಸಿದ್ದರು ಎಂದರೆ ಸುಳ್ಳು. ಸದರಿ ದಾವೆಯಲ್ಲಿ 1 ನೇ ಪ್ರತಿವಾದಿಯ ತಂದೆ ನಿಧನಹೊಂದಿದ್ದು, ತದನಂತರ ಅವರ ವಾರಸುದಾರರಾಗಿ 1 ನೇ ಪ್ರತಿವಾದಿ ಮತ್ತು ಅವರ ಸಹೋದರ, ಸಹೋದರಿಯರು ದಾವೆ ನಡೆಸಿದ್ದರು ಎಂದರೆ ಗೊತ್ತಿಲ್ಲ. ಸದರಿ ದಾವೆಯನ್ನು ಅವರಿಗೆ ಮಂಜೂರಾಗಿದ್ದ 964/964/772 ರ 18 X 72 ಅಡಿ ಜಾಗಕ್ಕೆ ನಾವು ತೊಂದರೆ ಕೊಟ್ಟಿದ್ದೇವೆ ಎಂದು ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನನ್ನ ಅಜ್ಜಿ ತಕರಾರು ಹಾಕಿದ್ದರು ಎಂದರೆ ಸರಿ. ಸದರಿ ತಕರಾರಿನಲ್ಲಿ ನಮ್ಮ ಸ್ವತ್ತಿನ ಉತ್ತರಕ್ಕೆ - ಷೇರಖಾನ್ ಇವರಿಗೆ ಸೇರಿದ ಅಸೆಸಮೆಂಟ್ ನಂ. 774 ಇರುತ್ತದೆ ಎಂದು ನಮೂದಿಸಿದ್ದಾರೆ ಎಂದರೆ ಸುಳ್ಳು. ಸದರಿ ಷೇರಖಾನ್ ನಮ್ಮ ಅಜ್ಜನ ತಮ್ಮ ಎಂದರೆ ಸರಿ. ಸದರಿ ತಕರಾರಿನಲ್ಲಿ ನನ್ನ ಅಜ್ಜಿ ಫಾತೀಮಾಬಿಯ ಚಕ್ಕುಬಂದಿಯನ್ನು ಪೂರ್ವಕ್ಕೆ - ರಸ್ತೆ, ಪಶ್ಚಿಮಕ್ಕೆ- ವೀರಶೈವ ರುದ್ರಭೂಮಿಗೆ ಹೋಗುವ ರಸ್ತೆ, ಉತ್ತರಕ್ಕೆ- ಷೇರಖಾನ್ರವರ ಜಮೀನು, ದಕ್ಷಿಣಕ್ಕೆ- ರಸ್ತೆ ಎಂದು ತಪ್ಪಾಗಿ ತೋರಿಸಿದ್ದರು ಎಂದರೆ ಸರಿಯಲ್ಲ. ಸದರಿ ಚಕ್ಕುಬಂದಿಯಲ್ಲಿ ದಕ್ಷಿಣಕ್ಕೆ ಪ್ರತಿವಾದಿಯರ ಸ್ವತ್ತಿದ್ದರೂ ಸಹ ತಪ್ಪಾಗಿ ರಸ್ತೆ ಎಂದು ತೋರಿಸಿದ್ದೆವು ಎಂದರೆ ಸರಿಯಲ್ಲ. ಆ ದಾವೆಯಲ್ಲಿ ಪ್ರತಿವಾದಿಯರು ಉತ್ತರಕ್ಕೆ- ನಮ್ಮ ಸ್ವತ್ತು ಬರುತ್ತದೆ ಎಂದು ಸರಿಯಾಗಿ ತೋರಿಸಿದ್ದರು ಎಂದರೆ ಸಾಕ್ಷಿಯು ನನ್ನ ಚಿಕ್ಕಪ್ಪ ಹಬೀಬ್ ಖಾನ್ ರವರ ಸ್ವತ್ತು ಇದೆ ಎನ್ನುತ್ತಾರೆ. ಆದ್ದರಿಂದ ಪ್ರತಿವಾದಿಯರು ಉತ್ತರಕ್ಕೆ ತೋರಿಸಿದ ಚಕ್ಕುಬಂದಿ ಸರಿಯಾಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯರ ಸ್ವತ್ತಿನ ಉತ್ತರಕ್ಕೆ- ಯಾವುದೇ ಖಾಲಿ ಜಾಗ ಇರಲಿಲ್ಲ ನನ್ನ ಮತ್ತು ನಮ್ಮ ಚಿಕ್ಕಪ್ಪ ಹಬೀಬ್ ಖಾನ್ ರವರ ಮನೆ ಇತ್ತು ಎಂದರೆ ಸರಿಯಲ್ಲ.

4. ಅಸೆಸಮೆಂಟ್ ನಂ. 772, 773, 774 ಸಾಲಾಗಿ ಬರುತ್ತವೆ ಎಂದರೆ ಸಾಕ್ಷಿಯು ಇರಬಹುದು ಆದರೆ ಅಸೆಸಮೆಂಟ್ ನಂ. 772 ರಸ್ತೆಗೆ ಹೋಗಿರುತ್ತದೆ. 773 ನಮ್ಮ ಮನೆ ಮತ್ತು ಖಾಲಿ ಸೈಟ್ ಇರುತ್ತದೆ, 774 ಷೇರಖಾನ್ ರವರಿಗೆ ಸೇರಿದ ಸ್ವತ್ತು ಅವರು ಅದನ್ನು ಮುಸ್ತಫಾ ಎನ್ನುವವರಿಗೆ ಮಾರಾಟ ಮಾಡಿದ್ದಾರೆ ಎನ್ನುತ್ತಾರೆ. ಸದರಿ ಮುಸ್ತಫಾ ರವರ ಸ್ವತ್ತು ನಮ್ಮ ಸ್ವತ್ತಿನ ಉತ್ತರಕ್ಕೆ ಬರುತ್ತದೆ ಎಂದರೆ ಸರಿ. ಅಸೆಸಮೆಂಟ್ ನಂ. 772 ರಲ್ಲಿ ರಸ್ತೆ ಬರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಮತ್ತು ಅದು ಪ್ರತಿವಾದಿಗೆ ಸೇರಿದ ಸ್ವತ್ತು ಎಂದರೆ ಸರಿಯಲ್ಲ. ಪ್ರತಿವಾದಿಯರ ಸ್ವತ್ತಿನ ದಕ್ಷಿಣಕ್ಕೆ- ರಸ್ತೆ ಇರುತ್ತದೆ ಎಂದರೆ ಸರಿಯಲ್ಲ. ಮನೆ ಇರುತ್ತದೆ.

5. ಈ ಹಿಂದೆ ನಮ್ಮ ಅಜ್ಜಿ ಸಲ್ಲಿಸಿದ ಅ. ದಾ. 59/1986 ರಲ್ಲಿ ಮತ್ತು ಈ ದಾವೆಯಲ್ಲಿ ದಾವಾ ಸ್ವತ್ತಿನ ದಕ್ಷಿಣಕ್ಕೆ ರಸ್ತೆ ಇರುತ್ತದೆ ಎಂದು ತಪ್ಪಾಗಿ ತೋರಿಸಿರುತ್ತೇವೆ, ಆದರೆ ಅಲ್ಲಿ ಪ್ರತಿವಾದಿಯರ ಸ್ವತ್ತು ಇರುತ್ತದೆ ಎಂದರೆ ಸರಿಯಲ್ಲ. ಅ. ದಾ. 66/1986 ರಲ್ಲಿ ದಕ್ಷಿಣಕ್ಕೆ ರಸ್ತೆ ಇರುವುದಿಲ್ಲ ಎಂದು ನ್ಯಾಯಾಲಯವು ಪರಿಗಣಿಸಿ ಡಿಕ್ರಿ ಮಾಡಿತ್ತು ಎಂದರೆ ಸುಳ್ಳು. ಸದರಿ ಡಿಕ್ರಿ ಆಗಿದ್ದರೂ ಸಹ ಅದೇ ಸ್ವತ್ತಿನ ಮೇಲೆ ಪ್ರತಿವಾದಿಯರ ವಿರುದ್ಧ ದಾವೆ ಮಾಡಿದ್ದೇನೆ ಎಂದರೆ ಸುಳ್ಳು. ಪ್ರತಿವಾದಿ ಮತ್ತು ನಮ್ಮ ಸ್ವತ್ತಿನ ನಡುವೆ ಯಾವುದೇ ರಸ್ತೆ ಇಲ್ಲ ಎಂದರೆ ಸರಿಯಲ್ಲ. ಆದರೂ ಸಹ ದಕ್ಷಿಣಕ್ಕೆ ರಸ್ತೆಯನ್ನು ತೋರಿಸಿ ಸುಳ್ಳು ನಕಾಶೆಯನ್ನು ಹಾಕಿ ದಾವೆ ಮಾಡಿದ್ದೇನೆ ಎಂದರೆ ಸಾಕ್ಷಿಯ ಸದರಿ ರಸ್ತೆಯನ್ನು ಈಗ ಅಂದರೆ 10 ರಿಂದ 12 ವರ್ಷಗಳ ಹಿಂದೆ ಮಾಡಿದ್ದಾರೆ ಮೊದಲು ಇರಲಿಲ್ಲ ಎನ್ನುತ್ತಾರೆ. ಸದರಿ ರಸ್ತೆಯನ್ನು ಸರ್ಕಾರದಿಂದ ಮಾಡಲಾಗಿದೆ. ಈ ಹಿಂದೆ ನಾವು ದಾವೆ ಮಾಡಿದಾಗ ದಕ್ಷಿಣಕ್ಕೆ ರಸ್ತೆ ಇರಲಿಲ್ಲ. ಆದರೂ ಸಹ ಅ. ದಾ. 59/1986 ರಲ್ಲಿ ದಕ್ಷಿಣಕ್ಕೆ ರಸ್ತೆ ಇರುತ್ತದೆ ಎಂದು ತೋರಿಸಿದ್ದೇವೆ ಎಂದರೆ ಸಾಕ್ಷಿಯು ಈ ಹಿಂದೆ ರಸ್ತೆ ಇರಲಿಲ್ಲ ಎನ್ನುತ್ತಾರೆ. ನಾನು ಹೇಳುವಂತೆ 10 ರಿಂದ 12 ವರ್ಷಗಳ ಹಿಂದೆ ರಸ್ತೆ ಮಾಡಿರುವುದಿಲ್ಲ, ಆದರೆ ಪ್ರತಿವಾದಿಯರ ದಕ್ಷಿಣಕ್ಕೆ- ರಸ್ತೆ ಇರುತ್ತದೆ ಎಂದರೆ ಸರಿಯಲ್ಲ. ಆದ್ದರಿಂದ ನಾನು ಮತ್ತು ನಮ್ಮ ಚಿಕ್ಕಪ್ಪ ಅಸೆಸ್ ಮೆಂಟ್ ನಂ. 773 ರ ಪೂರ್ಣ ಜಾಗದಲ್ಲಿ ಮನೆ ಕಟ್ಟಿಕೊಂಡಿದ್ದೇವೆ ಅಲ್ಲಿ ಖಾಲಿ ಜಾಗ ಇಲ್ಲ ಎಂದರೆ ಸಾಕ್ಷಿಯು ಅವರ

ಮನೆ 17 ಅಡಿ ಇರುತ್ತದೆ ಆದರೆ ಸ್ವತ್ತಿನ ಅಳತೆ 30 ಅಡಿ ಎಂದು ವಿಭಾಗಪತ್ರದಲ್ಲಿ ನಮೂದು ಇದೆ ಎನ್ನುತ್ತಾರೆ. ಸದರಿ ವಿಭಾಗಪತ್ರವನ್ನು 20.05.2016 ರಂದು ಮಾಡಿಕೊಂಡಿದ್ದೇವೆ ಎಂದರೆ ಸರಿ. ಈ ದಾವೆಗಾಗಿ ಸದರಿ ವಿಭಾಗಪತ್ರವನ್ನು ಸೃಷ್ಟಿಸಿರುತ್ತೇವೆ ಮತ್ತು ಅದೇ ಕಾರಣದಿಂದ ಹೆಣ್ಣು ಮಕ್ಕಳನ್ನು ವಿಭಾಗಪತ್ರದಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಸದರಿ ವಿಭಾಗಪತ್ರದಲ್ಲಿ ನನ್ನ ದೊಡ್ಡಪ್ಪ ಆಯುಬ್ ಖಾನ್ ಮತ್ತು ಚಿಕ್ಕಪ್ಪ ನಾಸೀರ್ ಖಾನ್ ರವರಿಗೆ ಹಿಸ್ಸೆ ಕೊಟ್ಟಿಲ್ಲ.

6. ಸದರಿ ವಿಭಾಗಪತ್ರದಲ್ಲಿ ನನ್ನ ತಂದೆ ಮತ್ತು ಚಿಕ್ಕಪ್ಪ ಹಬೀಬ್ ಖಾನ್ ರವರ ನಡುವೆ ಎರೆಡು ಆಸ್ತಿಗಳಿಗೆ ಸಂಬಂಧಿಸಿದಂತೆ ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿ. ಸಾಕ್ಷಿಯು ಮನೆ ಹಬೀಬ್ ಖಾನ್ ರವರಿಗೆ ಸೇರಿದ್ದು, ಖಾಲಿ ಜಾಗ ನಮಗೆ ಸೇರಿದ್ದು ಎನ್ನುತ್ತಾರೆ. ಈ ದಾವೆ ಹಾಕುವ ಸಂಬಂಧವೇ ಖಾಲಿ ಜಾಗ ಎಂದು ವಿಭಾಗಪತ್ರದಲ್ಲಿ ತೋರಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ವಿಭಾಗಪತ್ರದಲ್ಲಿ 2 ನೇ ಪಾರ್ಟಿಯ ಹಿಸ್ಸೆಯ ದಕ್ಷಿಣಕ್ಕೆ ಪ್ರತಿವಾದಿಯ ಸ್ವತ್ತು ಇದ್ದರೂ ಸಹ ದಕ್ಷಿಣಕ್ಕೆ- ರಸ್ತೆ ಎಂದು ಸುಳ್ಳಾಗಿ ತೋರಿಸಿದ್ದೇವೆ ಎಂದರೆ ಸರಿಯಲ್ಲ.

7. ಹಬೀಬುಲ್ಲಾ ರವರ ಹಿಸ್ಸೆಯ ಉತ್ತರಕ್ಕೆ- ಮುಸ್ತಫಾರವರ ಸ್ವತ್ತು ಇದೆ ಎಂದು ತೋರಿಸಿದ್ದೇವೆ ಎಂದರೆ ಸರಿ. ಸದರಿ ಮುಸ್ತಫಾರವರು ಷೇರ್ ಖಾನ್ ರವರಿಂದ ಸದರಿ ಸ್ವತ್ತನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿ. ವಿಭಾಗಪತ್ರದಲ್ಲಿ ಹಿಸ್ಸೆಯ ವಿಸ್ತೀರ್ಣಗಳನ್ನು ಮೂಲ ದಾಖಲಾತಿಗಳಲ್ಲಿದೇ ಇದ್ದರೂ ನಮಗೆ ಬೇಕಾದ ಹಾಗೆ ನಮೂದಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಆದ್ದರಿಂದ 15 X 60 ಎಂದು ವಿಭಾಗಪತ್ರದಲ್ಲಿ ತೋರಿಸಿರುವ ಅಳತೆ ಸುಳ್ಳು ಎಂದರೆ ಸರಿಯಲ್ಲ.

8. ನಿಪಿ 8 ಫೋಟೋದಲ್ಲಿ ನಮ್ಮ ತಂದೆ ಪ್ರತಿವಾದಿಯರ ಸ್ವತ್ತಿನಲ್ಲಿ ನಿಂತು ಫೋಟೋ ತೆಗೆಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಫೋಟೋದಲ್ಲಿ ಕಂಡು ಬರುವ ಪೂರ್ಣ ಖಾಲಿ ಸ್ವತ್ತು ಪ್ರತಿವಾದಿಯರಿಗೆ ಸೇರಿದ್ದು, ಮನೆ ನಮಗೆ ಸೇರಿದ್ದು ಎಂದರೆ ಸರಿಯಲ್ಲ. ಅದೇ ಕಾರಣದಿಂದ ನಿಪಿ 8 ಫೋಟೋದಲ್ಲಿ ನಮ್ಮ ಸ್ವತ್ತಿನ ದಕ್ಷಿಣಕ್ಕೆ ಪ್ರತಿವಾದಿಯರ ಸ್ವತ್ತು ಅದಾದನಂತರ ರಸ್ತೆ ಬರುತ್ತದೆ ಎಂದರೆ ಸರಿಯಲ್ಲ. ಸದರಿ ಸೈಟ್

ನನಗೆ ಸೇರಿದ್ದು. ಸದರಿ ಫೋಟೋವನ್ನು ಯಾರು ತೆಗೆದಿರುತ್ತಾರೆ ಎಂದು ಗೊತ್ತಿಲ್ಲ. ಸದರಿ ಫೋಟೋದ ರಶೀದಿಯನ್ನು ಹಾಜರಪಡಿಸಿಲ್ಲ ಎಂದರೆ ಸರಿ. 8 ರಿಂದ 10 ವರ್ಷಗಳ ಹಿಂದೆ ದಾವಾ ಸ್ವತ್ತಿನಲ್ಲಿ ಪ್ರತಿವಾದಿಯರು ಸಣ್ಣ ಗೂಡಂಗಡಿ ಕಟ್ಟಿರುತ್ತಾರೆ. ಯಾವ ದಿನಾಂಕ ಮತ್ತು ಸಾಲಿನಲ್ಲಿ ಸದರಿ ಗೂಡಂಗಟ್ಟಿ ಕಟ್ಟಿರುತ್ತಾರೆ ಎಂದು ಗೊತ್ತಿಲ್ಲ. ಪ್ರತಿವಾದಿಯರು ಬಲಾತ್ಕಾರವಾಗಿ ಸದರಿ ಅಂಗಡಿಯನ್ನು ಕಟ್ಟಿಕೊಂಡಿರುತ್ತಾರೆ. ಇದರ ಬಗ್ಗೆ ನಾವು ಪೋಲಿಸ್ ಠಾಣೆಯಲ್ಲಿ ದೂರು ಕೊಟ್ಟಿಲ್ಲ ಮತ್ತು ಪಂಚಾಯಿತಿಯಲ್ಲಿಯೂ ಸಹ ದೂರು ಕೊಟ್ಟು ಅವರನ್ನು ಬಿಡಿಸಲು ಪ್ರಯತ್ನಿಸಿಲ್ಲ. ವಕೀಲರ ಮೂಲಕ ಪ್ರತಿವಾದಿಯರಿಗೆ ನೋಟಿಸ್ ಕೊಟ್ಟಿರುವುದಿಲ್ಲ. ಪ್ರತಿವಾದಿಯರು ಅವರಿಗೆ ಸೇರಿದ ಅಸೆಸಮೆಂಟ್ ಸಂ.772 ರಲ್ಲಿ ಸದರಿ ಗೂಡಂಗಡಿ ಇಟ್ಟುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಜಾಗ ಇದ್ದಾಗ ನಮ್ಮ ಸ್ವತ್ತಿನಲ್ಲಿ ಬಂದು ಗೂಡಂಗಡಿ ಇಡುವ ಪ್ರಮೇಯ ಬರುವುದಿಲ್ಲ ಎಂದರೆ ಸಾಕ್ಷಿಯು ಪ್ರತಿವಾದಿಯ ಜಾಗ ರಸ್ತೆಗೆ ಹೋಗಿದೆ ಎನ್ನುತ್ತಾರೆ. ಪ್ರತಿವಾದಿಯರ ಜಾಗವನ್ನು ಒಕ್ಕೆಬಿಸಲು ಸುಳ್ಳು ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಅವರ ಜಾಗದಲ್ಲಿ 2 ತೆಂಗಿನ ಮರ ಬೆಳೆಸಿದ್ದು, ಈಗ ಒಂದು ತೆಂಗಿನ ಮರ ಇರುವುದಿಲ್ಲ, ಒಂದು ಮಾತ್ರ ಇರುತ್ತದೆ ಎಂದರೆ ಸರಿ.

ಮುಂದುವರೆದ ಪಾಟಿ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು.

ಓ.ಹೇ.ಕೇ.ಸರಿಯಿದೆ.

(ತೆ.ನ್ಯಾಸಾ.ಹೇ.ಬೆ.ಮಾಡಲಾಯಿತು).

ಸಿ/ಸಿ ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಶಿಕಾರಿಪುರ.